
ಇನ್‌ಸ್ಟಾಗ್ರಾಮ್ - ಫೇಸ್‌ಬುಕ್ - ವಾಟ್ಸಾಪ್ ಎಂಬ ಹೊಸ ಕಾಲದ ಸಾಧನಗಳ ಮೂಲಕ ಅನಂತನ ಮನೆಯ ವಿಷಯ ಈಗ ಆತನ ಮನೆಯ ವಿಷಯವಾಗಷ್ಟೇ ಉಳಿದಿಲ್ಲ. 'ಎಂಗೇಜ್ಡ್ ಟು ಅ ಮಾರ್ಮನ್' ಎಂಬ ಅಕ್ಷರಾಳ ಇನ್‌ಸ್ಟಾ ಸ್ಟೋರಿಯಿಂದ ಅದು ಲೋಕದೆಲ್ಲೆಡೆ ಸೋರಿ ಹೋಗಿದೆ. ಮಠದಿಂದ ಬಹಿಷ್ಕಾರಗೊಳ್ಳುವುದಕ್ಕಿಂತಲೂ ಘೋರವಾದದ್ದು ಈ ವಾಟ್ಸಾಪ್ ಬಹಿಷ್ಕಾರ ಅಂತ ಅನಂತ ನೊಂದುಕೊಳ್ಳುವ ಸಂದರ್ಭವೂ ಬರುತ್ತದೆ. ಲೋಕರೂಢಿಯ ಮಾತಿನಂತೆ ಮನೆಯ ವಿಷಯದಲ್ಲಿ ಇನ್ನೊಬ್ಬರು ಪರಿಹಾರ ಸೂಚಿಸಲು ಬಂದರೂ ಮನೆಯವರೆಲ್ಲ ಇಲ್ಲಿ ಒಂದಾಗಿ ನಿಲ್ಲುವುದಿಲ್ಲ. ಫೇಸ್‌ಬುಕ್ಕಿನ ಪೋಸ್ಟ್ ಒಂದರ ಕಾರಣದಿಂದ ಇದು ಬೀದಿ ಜಗಳವಾಗುತ್ತದೆ. ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳ ಈ ಧ್ರುವೀಕರಣದ ಕಾಲಘಟ್ಟದಲ್ಲಿ ಎಲ್ಲರೂ ಅವರವರ ಮೂಗಿನ ನೇರಕ್ಕೇ ಯೋಚಿಸುವ ವ್ಯಕ್ತಿಕೇಂದ್ರಿತ ಮನಸ್ಥಿತಿಯೆಡೆಗೆ ಈ ಕಾದಂಬರಿ ಬೆರಳಿಟ್ಟು ತೋರುವಂತಿದೆ.

ಈ ಕಾದಂಬರಿಯ ನಿರೂಪಣೆಯಲ್ಲಿ ಒಂದು ಬಂಡಾಯವಿದೆ, ಅದನ್ನು ಅಲಕ್ಷ್ಯ ಮಾಡುವಂತಿಲ್ಲ. ಬ್ರಾಹ್ಮಣ್ಯದಲ್ಲೇ ಇರುವ ಒಳ ಪಂಗಡಗಳ ರಾಜಕೀಯ, ಕಂದಾಚಾರಗಳಿಗೆ ಅನಂತಕೃಷ್ಣ ಒಬ್ಬ ಪ್ರತಿಗಾಮಿಯಾಗಿ ಸಾಕ್ಷಿಯಾಗುತ್ತಾನೆ. ಇವನು ಎಂ.ಡಿ. ಮಾಡಿ ವೈದ್ಯನಾಗಿದ್ದರೂ, ಮನೆಯವರ ಪಾಲಿಗೆ ಹೆಣ ಕುಯ್ಯುವ ಡಾಕ್ಟರ್. ಕಾದಂಬರಿಯುದ್ದಕ್ಕೂ ಅನಂತ ತಾನು ಬೆಳದ ಮನೆಗಳ ವಾತಾವರಣವನ್ನೂ, ಜನರ ಮನಸ್ಥಿತಿಯನ್ನೂ ಅಳೆದು ತೂಗುತ್ತಲೇ ತನ್ನನ್ನೂ ತಾನು ವಿಮರ್ಶಿಸಿಕೊಳ್ಳುತ್ತಾನೆ. ಬಹಳಷ್ಟು ಕಡೆಗಳಲ್ಲಿ ಸಂಭಾಷಣೆಯಲ್ಲೇ ಮುಂದುವರೆವ ಈ ಕಾದಂಬರಿ ಕೇವಲ ಪರ-ವಿರೋಧಗಳ ಒಂದು ಡಿಬೇಟ್ ಆಗದ ಹಾಗೆ ಈ ಬಗೆಯ ಸ್ವವಿಮರ್ಶೆ ತಡೆದಿದೆ ಎಂಬುದು ಮುಖ್ಯ ಅಂಶ. ಅದೇ ಕಾದಂಬರಿಯ ಗೆಲುವು ಕೂಡ. ಅಪ್ಪನ ಸಾವು, ಘಟಶ್ರಾದ್ಧದ ವಿವರಗಳು ಹೃದಯ ಒಡೆದುಹೋಗುವಷ್ಟು ತೀವ್ರವಾಗಿ ಬರೆಸಿಕೊಂಡಿವೆ.

ಒಂದು ಕಡೆ ಅನಂತ ತನ್ನ ತಾಯಿ ರುಕ್ಮಿಣಿಗೆ ಕೇಳುತ್ತಾನೆ, 'ಇನ್ನೊಬ್ಬರ ಜೀವನಶೈಲಿಯನ್ನು ಇಷ್ಟೊಂದು ದ್ವೇಷಿಸುವ, ಅವರ ಮನಸ್ಸಿಗೆ ನೋವು



ಸತ್ಕುಲ ಪ್ರಸೂತರು
ಲೇ: ಡಾ. ಗುರುಪ್ರಸಾದ್ ಕಾಗಿನೆಲೆ
ಬೆಲೆ: ₹ 295
ಪ್ರ: ಅಂಕಿತ ಪುಸ್ತಕ, ಬೆಂಗಳೂರು.
ಫೋನ್: 9019190502

ಮಾಡುವುದು ಯಾವ ಮನುಷ್ಯ ಧರ್ಮವಮ್ಮಾ?' ಅದಕ್ಕೆ ರುಕ್ಮಿಣಿಯ ಉತ್ತರ, 'ಅದೇ ಮಾತನ್ನು ಗಲಗಲಿಯವರೂ ನಿನಗೆ ಕೇಳಿದ್ದರೆ ನೀನೇನು ಉತ್ತರ ಕೊಡ್ತೀಯಪ್ಪ?'

ಒಬ್ಬರನ್ನೊಬ್ಬರು 'ಜಡ್ಡು ಮನಸ್ಸಿನವರು' ಅಂತ ಕರೆದುಕೊಳ್ಳುವುದು ನಮ್ಮ ಕಾಲದ ಅತಿ ದೊಡ್ಡ ಹೈಲೈಟ್. ಅದನ್ನು ನಾವೆಲ್ಲ ಒಂದಲ್ಲಾ ಒಂದು ಸಮಯಕ್ಕೆ ನಮ್ಮ ಹಾಗೆ ಯೋಚಿಸದವರ ಕುರಿತು ಆಡಿಕೊಂಡೇ ಇರುತ್ತೇವೆ. 'ಈ ಲೋಕದಲ್ಲಿ ನಾವು ಮಾಡುವ ಕೆಲಸಗಳಿಗೆಲ್ಲ ಒಂದೇ ಗುರಿ. ನಮಗೆ ಮತ್ತು ನಮ್ಮ ಪಿತೃಗಳಿಗೆ ಮೋಕ್ಷ ಪ್ರಾಪ್ತಿ... ನಾನು ಕ್ವಾಂಟಮ್ ಫಿಸಿಕ್ಸ್ ಪಾಠ ಹೇಳ್ತೀನೋ. ವಿಜ್ಞಾನಕ್ಕೆ ಪುರಾವೆಗಳು ಬೇಕು. ಆದರೆ, ನಂಬಿಕೆಗಳಿಗೆ ಪುರಾವೆಗಳನ್ನು ಒದಗಿಸಲಿಕ್ಕೆ ಆಗಲ್ವೋ' ಎನ್ನುವ ಮಾಧೂ ದೊಡ್ಡಪ್ಪ